ದಿನಾಂಕ 04-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಎಸ್.ಎಂ.ಆರ್. ವಕೀಲರಿಂದ

ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾನು ಯಾವುದೇ ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ಕನ್ನಡದಲ್ಲಿ ಬರೆಸಿ ಹಾಕಿರುತ್ತೇನೆ. ಸಾಕ್ಷ್ಯ ಪ್ರಮಾಣ ಪತ್ರಕ್ಕೆ ನಾನು ನಂತರ ನನ್ನ ಸಹಿ ಮಾಡಿರುತ್ತೇನೆ. ಸದರಿ ರೀತಿಯಂತೆ ಕನ್ನಡ ಭಾಷೆಯಲ್ಲಿ ಸಾಕ್ಷ್ಯ ಪ್ರಮಾಣ ಪತ್ರವನ್ನು ನ್ಯಾಯಾಲಯದ ಮುಂದೆ ಹಾಕಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ನಾನು, ಅಮೀನ್, ಫಾರುಖ್, ಮುನೀರ್‌ಪಾಷಾ,ಫರೀದಾಬೇಗಂ ಮತ್ತು ನನ್ನ ತಾಯಿಯಾದ ಫಾತೀಮಾಬೇಗಂರವರು ಸೇರಿಕೊಂಡು ಹೂಡಿರುತ್ತೇವೆ. ಸಾಕ್ಷಿಯು ನಂತರ ಮುಂದುವರೆದು ಗೌಸಿಯಾಬೇಗಂರವರು ಸಹ ನಮ್ಮ ಜೊತೆ ದಾವಾವನ್ನು ಹೂಡಿರುತ್ತಾರೆಂದು ನುಡಿಯುತ್ತಾರೆ. ನನ್ನ ತಾಯಿಯಾದ ಫಾತೀಮಾ ಬೇಗಂ ಜೀವಂತ ಇರುತ್ತಾರೆ. ಸದರಿಯವರು ಈ ದಾವೆಯಲ್ಲಿ ಎಷ್ಟನೇ ಪಕ್ಷಗಾರರಾಗಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನನ್ನ ತಾಯಿಯನ್ನು ಪಕ್ಷಗಾರರಾಗಿ ಮಾಡಿಲ್ಲ ಎಂದರೆ ಸರಿ. ನನ್ನ ತಾಯಿಯನ್ನು ಈದಾವೆಯಲ್ಲಿ ಪಕ್ಷಗಾರಳಾಗಿ ಮಾಡದೇ ಇರುವುದರಿಂದ ದಾವಾವು ಊರ್ಜಿತ ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವಾವನ್ನು ಹೂಡಲು ಮಾಹಿತಿಯನ್ನು ನನ್ನ ತಾಯಿಯನ್ನು ಕೇಳಿ ಹೂಡಿರುತ್ತೇವೆ. ಈ ಪ್ರಕರಣದ ಬಗ್ಗೆ ಮಾಹಿತಿಯು ನನ್ನ ತಾಯಿಗೆ ಹೊರತುಪಡಿಸಿ ನನಗೆ ಏನೂ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ದಾವಾ ಆಸ್ತಿ ನಮ್ಮದೇ ಇರುತ್ತದೆ ಎಂದು ಹೇಳಿ ಮತ್ತು

ಖರೀದಿ ಪತ್ರವನ್ನು ರದ್ದುಮಾಡುವಂತೆ ಪರಿಹಾರ ಕೋರಿ ಹೂಡಿರುತ್ತೇವೆ. ದಾವಾ ಆಸ್ತಿಯು ನಮ್ಮದೇ ಇರುತ್ತದೆ ಎಂದು ತೋರಿಸಲು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ. ನಿ.ಪಿ. 1 ದಾಖಲೆಯು ಖರೀದಿ ಪತ್ರ ಇರುತ್ತದೆ.

ಪ್ರಶ್ನೆ : ನಿ.ಪಿ. 1 ಆಧಾರದಡಿಯಲ್ಲಿ ಆಸ್ತಿಯು ಯಾರಿಂದ ಯಾರಿಗೆ ವರ್ಗಾವಣೆ ಆಗಿರುತ್ತದೆ?

ಉತ್ತರ: ಸಾಕ್ಷಿಯು ಯಾವುದೇ ಆಸ್ತಿಯು ಮಾರಾಟ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ನಿ.ಪಿ. 2ರ ದಾಖಲೆಯ ಬಗ್ಗೆ ನನಗೆ ಏನೂ ಮಾಹಿತಿ ಇರುವುದಿಲ್ಲ. ನಾನು ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಏನೂ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಕ್ಕೆ 2017-18 ನೇ ಸಾಲಿನ ಹೊಲಕ್ಕೆ ಸಂಬಂಧಪಟ್ಟ ಪಹಣಿ ಪತ್ರಿಕೆಯನ್ನು ದಾಖಲಿಸಿರುತ್ತೇನೆ.

ನನಗೆ ಈ ಪ್ರಸ್ತುತ 37 ವರ್ಷ ವಯಸ್ಸು ಇರುತ್ತದೆ. ನನ್ನ ತಂದೆಯ ಹೆಸರು ಮೊಹಮ್ಮದ್ ಸಾಬ್. ನನ್ನ ತಂದೆ ಪ್ರತಿವಾದಿಗೆ 1990ನೇ ಸಾಲಿನಲ್ಲಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದರು ಎಂದು ಹೇಳಲಾದ ಸಂದರ್ಭದಲ್ಲಿ ನನಗೆ ಸುಮಾರು 12 ರಿಂದ 13 ವರ್ಷ ವಯಸ್ಸು ಇರಬಹುದು. 1990ನೇ ಸಾಲಿನಲ್ಲಿ ನನಗೆ ಸುಮಾರು 3 ರಿಂದ 4 ವರ್ಷ ವಯಸ್ಸು ಇತ್ತು ಎಂದರೆ ಇರಬಹುದು. ಆ ಸಂದರ್ಭದಲ್ಲಿ ನಮಗೆ ಯಾವುದೇ ತಿಳುವಳಿಕೆ ಇಲ್ಲದೇ ಇದ್ದುದರಿಂದ ಮಾರಾಟ ಮಾಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಗೆ ದಾವಾ ಜಮೀನನ್ನು ಸಾಗುವಳಿ ಮಾಡಲು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ 2 ನೇ ಕಂಡಿಕೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ಖರೀದಿ ಪತ್ರ ಆಗಿದೆ ಎಂದು ಹೇಳಲಾದ ದಿನದಿಂದ ಇಂದಿನವರೆಗೂ ಪ್ರತಿವಾದಿಯು ದಾವಾ

ಆಸ್ತಿಯ ಮಾಲೀಕ ಮತ್ತು ಸ್ವಾಧೀನದಲ್ಲಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ದಾವಾ ಆಸ್ತಿಯು ಮಾಲೀಕರು ನಾವು ಇದ್ದು, ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆಂದು ನುಡಿಯುತ್ತಾರೆ.

ನಿ.ಡಿ. 1 ರಿಂದ 6 ದಾಖಲೆಗಳನ್ನು ಪ್ರತಿವಾದಿ ನ್ಯಾಯಾಲಯದ ಮುಂದೆ ಸಲ್ಲಿಸಿದಂತಹ ದಾಖಲೆಗಳಿರುತ್ತವೆ ಎಂದರೆ ಇರಬಹುದು. ಸದರಿ ದಾಖಲೆಗಳು ನಿಜಾಂಶದಿಂದ ಮತ್ತು ಸತ್ಯಾಂಶಗಳಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಜಮೀನುಗಳಲ್ಲಿ ಖುಷ್ಕಿ, ತರಿ ಮತ್ತು ಭಾಗಾಯ್ತು ಎಂದು 3 ವಿಂಗಡನೆಗಳು ಮಾಡುತ್ತಾರೆ ಎಂದರೆ ಸರಿ. ಖುಷ್ಕಿ ಜಮೀನು ಎಂದರೆ ಮಳೆ ಆಶ್ರಿತ ಜಮೀನುಗಳು ಎಂದರೆ ಸರಿ. ತರಿ ಜಮೀನು ಎಂದರೆ ನೀರಾವರಿ ಜಮೀನುಗಳು ಎಂದರೆ ಸರಿ. ನೀರಾವರಿ ಜಮೀನುಗಳಿಗೆ ನದಿ, ಪಂಪ್‌ಸೆಟ್ ಮತ್ತು ಕೆನಾಲ್‌ಗಳಿಂದ ನೀರನ್ನು ಹರಿಸಿಕೊಳ್ಳಬಹುದು ಎಂದರೆ ಸರಿ. ನಾನು ಮೂಲತಃವಾಗಿ ಹೋಟೇಲ್ ವ್ಯಾಪಾರ ಮಾಡುತ್ತೇನೆ ಎಂದರೆ ಸರಿ. ಇಂದಿನವರೆಗೂ ನಾನು ಹೋಟೇಲ್ ವ್ಯಾಪಾರವನ್ನು ಹೊರತುಪಡಿಸಿ ಒಕ್ಕಲುತನ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಾನು ಹೋಟೇಲ್ ವ್ಯಾಪಾರ ಮತ್ತು ಜಮೀನುಗಳನ್ನು ಮಾಡುತ್ತೇನೆಂದು ಬರೆಸಿಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ನಮಗೆ ಬೇರೆ ಯಾವ ಜಮೀನುಗಳಿರುವುದಿಲ್ಲ. ದಾವಾ ಆಸ್ತಿಯ ಕ್ಷೇತ್ರ 2 ಎಕರೆ 23 ಗುಂಟೆ ಇರುತ್ತದೆ. ಈ ಪ್ರಸ್ತುತ ದಾವಾ ಆಸ್ತಿಯ ಮಾರುಕಟ್ಟೆಯ ಬೆಲೆ 50 ಲಕ್ಷ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಕ್ಕಪಕ್ಕದಲ್ಲಿ ಈ ಪ್ರಸ್ತುತ ಆಸ್ತಿಗಳ ಬೆಲೆ ಸುಮಾರು 50 ಲಕ್ಷ ಇರಬಹುದು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಕುಷ್ಟಗಿ ಜಮೀನು ಬರುತ್ತದೆ. ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಏನು ಬರುತ್ತದೆ ಎಂದು ಗೊತ್ತಿಲ್ಲ. ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಖುಷ್ಕಿ ಜಮೀನಿನ ಬೆಲೆ ಹೊರತುಪಡಿಸಿ ತರಿ ಮತ್ತು ಭಾಗಾಯ್ತು ಜಮೀನುಗಳ ಬೆಲೆಗಳನ್ನು ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ದಾಖಲಿಸದಂತಹ ದಾಖಲೆಗಳ ಬಗ್ಗೆ ನನಗೆ ಏನೂ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ವಕೀಲರು ಬರೆದಿರುವ ಅಂಶಗಳಿಗೆ

ನಾನು ಸಹಿ ಮಾತ್ರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ 2017-18 ನೇ ಸಾಲಿನಲ್ಲಿ ದಾವಾ ಆಸ್ತಿಯ ಬೆಲೆ 1 ಎಕರೆ ರೂ. 1,29,000/- ಇತ್ತು ಎಂದು ಬರೆಸಿರುತ್ತೇನೆ. ತರಿ ಜಮೀನಿಗೆ 2018-19 ನೇ ಸಾಲಿನಲ್ಲಿ ಎಕರೆಗೆ ರೂ. 4,85,000/- ಬೆಲೆ ಇತ್ತು ಎಂದರೆ ಸರಿಯಲ್ಲ. ನಿ.ಡಿ. 1 ದಾಖಲೆಯನ್ನು ನಾನು ವೈಯಕ್ತಿಕವಾಗಿ ನೋಡಿಲ್ಲ ಎಂದರೆ ಸರಿಯಲ್ಲ. ಆದ್ರಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2018-19 ನೇ ಸಾಲಿನಲ್ಲಿ ದಾವಾ ಆಸ್ತಿಗೆ 1 ಎಕರೆ ಜಮೀನಿಗೆ 20 ಲಕ್ಷ ಬೆಲೆ ಇತ್ತು ಎಂದರೆ ಸರಿಯಲ್ಲ. ಪಹಣಿ ಪತ್ರಿಕೆಗಳಲ್ಲಿ ಮಾಲೀಕತ್ವ, ಬೆಳೆಗಳ ವಿವರಗಳು ಮತ್ತು ಸಾಗುವಳಿ ಮಾಡುವವರ ಬಗ್ಗೆ 3 ಘಟಕಗಳು ಇರುತ್ತವೆ ಎಂದರೆ ನನಗೆ ಮಾಹಿತಿ ಇಲ್ಲ. ನಿ.ಡಿ. 3 ದಾಖಲೆಯಲ್ಲಿ ಪ್ರತಿವಾದಿಯ ಹೆಸರಿನಲ್ಲಿ 2 ಎಕರೆ 29 ಗುಂಟೆ ಸರ್ವೆ ನಂ. 614/5 ರಂತೆ ದಾಖಲು ಇರುತ್ತದೆ ಎಂದರೆ ಸರಿ. ಅದೇರೀತಿ ಕಲಂ ನಂ. 9 ರಲ್ಲಿ ಪ್ರತಿವಾದಿಯ ಹೆಸರು ನಮೂದು ಇರುತ್ತದೆ ಎಂದರೆ ಸಾಕ್ಷಿಯು ನಾವು ಯಾವುದೇ ರೀತಿಯಲ್ಲಿ ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇರೀತಿ ಪಹಣಿ ಪತ್ರಿಕೆಯಲ್ಲಿ ಖುಷ್ಕಿ, ತರಿ, ಭಾಗಾಯ್ತು ಎಂದು ನಮೂದು ಇರುತ್ತದೆ ಎಂದರೆ ಇರಬಹುದು. ಅದೇರೀತಿ ಸದರಿ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿಯ ಹೆಸರಿನ ಮುಂದುಗಡೆ ತರಿ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ಪಹಣಿ ಪತ್ರಿಕೆಗಳ ಬಗ್ಗೆ ನನಗೆ ವೈಯಕ್ತಿಕವಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ. 3 ರಲ್ಲಿ ದಾವಾ ಜಮೀನು ನೀರಾವರಿ ಭೂಮಿ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಖುಷ್ಕಿ ಜಮೀನು ಇರುತ್ತದೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಿ.ಡಿ. 5 ದಾಖಲೆ ನಿಜಾಂಶದಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಜಮೀನಿಗೆ ಸುರೇಶರವರಿಂದ ಪಂಪ್‌ಸೆಟ್ ಮೂಲಕ ನೀರು ಹರಿಸಿಕೊಂಡು ನೀರಾವರಿ ಜಮೀನಿನಂತ ಭತ್ತವನ್ನು ಬೆಳೆಯುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ನೀರಾವರಿ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ನಿ.ಡಿ. 5 ದಾಖಲೆ ನಿಜಾಂಶದಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಖುಷ್ಕಿ ಜಮೀನು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನೀರಾವರಿ ಜಮೀನು ಇರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

2 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.